





# ತರಕಾರಿಯಲ್ಲಿ ತರಾವರಿ ಕಲೆ!

**ಮಧುಗಿರಿ ತಾಲ್ಲೂಕಿನ ಬಡವನಹಳ್ಳಿಯ ರತ್ನ ಅವರ ಅಡುಗೆ ಮನೆಯಲ್ಲಿ ತರಕಾರಿಗಳು ಬರೀ ಹೆಚ್ಚಿ ಅಡುಗೆ ಮಾಡುವುದಕ್ಕೆ ಮಾತ್ರ ಸೀಮಿತವಲ್ಲ. ತರಾವರಿ ತರಕಾರಿಗಳು ಕಲೆಯಾಗಿ ಅರಳುತ್ತವೆ. ವಿವಿಧ ವಿನ್ಯಾಸ ಪಡೆದುಕೊಂಡ ತರಕಾರಿ ನೋಡುಗರ ಮನಸೆಳೆಯುತ್ತದೆ. ಮನೆಯ ಪಾಕಶಾಲೆ ಕಲಾಶಾಲೆಯಾಗಿಯೂ ಪರಿವರ್ತನೆಯಾಗುತ್ತದೆ.**

**■ ಆರುಡೋ ಗಣೇಶ, ಕೋಡೂರು**

ಬೆಳಿಗ್ಗೆ ಏನು ತಿಂಡಿ, ಮಧ್ಯಾಹ್ನಕ್ಕೇನು, ರಾತ್ರಿಗೇನು ಬೇಯಿಸುವುದು... ಇದರ ನಡುವೆ ಆಫೀಸಿಗೆ ಹೊರಡುವ ಗಂಡ, ಸ್ಕೂಲು ಕಾಲೇಜಿಗೆ ಹೋಗುವ ಮಕ್ಕಳಿಗೆ ಸರಿಯಾದ ಸಮಯಕ್ಕೆ ತಿಂಡಿ ಕೊಟ್ಟು, ಬಾಕ್ಸ್ ಎಲ್ಲ ರೆಡಿ ಮಾಡಿ ಕಳಿಸಿಕೊಡುವಷ್ಟರಲ್ಲಿ ಸಾಕು ಸಾಕಾಗಿರುತ್ತದೆ. ಇಷ್ಟು ಸಮಯದಲ್ಲಿ ಹೆಚ್ಚಿನ ಗೃಹಿಣಿಯರು ಅದೆಷ್ಟು ಟೆನ್ಷನ್ನಿನಲ್ಲಿರುತ್ತಾರೆಂದರೆ, ಅವರಿಗೆ ನಡೆಯುತ್ತಿರುವ ಕೆಲಸದ ನಡುವೆ ಯಾರಾದರೂ ಒಂದು ಹೆಚ್ಚಿಗೆ ಮಾತನಾಡಿದರೂ ಸಾಕು ಸಿರ್ರಂತ ಸಿಟ್ಟು ಬರುತ್ತಿರುತ್ತದೆ; ಕಿರಿಕಿರಿಯಾಗುತ್ತಿರುತ್ತದೆ. ಇಂತಹ ಸಮಯದಲ್ಲಿ ಕ್ರಿಯಾಶೀಲವಾಗಿ ಏನಾದರೂ ಯೋಚಿಸುವುದು? ದೂರದ ಮಾತಲ್ಲ... ಅದು ಅಸಾಧ್ಯದ ಸಂಗತಿ ಎಂದುಕೊಂಡವರೇ ಹೆಚ್ಚಿನವರು.

ಆದರೆ ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನ ಬಡವನಹಳ್ಳಿ ರತ್ನ ಅವರು ಮಾತ್ರ ಹೀಗಲ್ಲ. ಅವರ ಬದುಕಿನಲ್ಲೂ ಬೆಳಿಗ್ಗೆ ಬೇಗ ತಿಂಡಿ ಮಾಡಿಕೊಡಬೇಕಾದ, ಮಕ್ಕಳಿಗೆ ಮಧ್ಯಾಹ್ನಕ್ಕೆ ಬಾಕ್ಸ್ ರೆಡಿ ಮಾಡಿಕೊಡಬೇಕಾದ ಒತ್ತಡವೇ ಇದೆ.